**ಸಾಕ್ಷಿಯನ್ನು ದಿನಾಂಕಃ18.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 3 ರಿಂದ 5 ನೇ ವಾದಿಯರ ಪರ ಶ್ರೀ ಡಿ ಕೆ ಪಿ ವಕೀಲರಿಂದಃ**

3. ನಾನು 26 X 32 ಅಡಿ ಮತ್ತು 42 X 32 ಅಡಿ ವಿಸ್ತೀರ್ಣದ ಆಸ್ತಿಯನ್ನು ನನ್ನ ಹೆಸರಿಗೆ ಪಂಚಾಯಿತಿಯಲ್ಲಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ, ನನ್ನ ತಂದೆಯ ಹೆಸರಿನಲ್ಲಿ ಇದ್ದಿದ್ದನ್ನು ನಾನು ಮಾಡಿಸಿಕೊಂಡಿದ್ದೇನೆ. ನನ್ನ ಸಹೋದರ ನದೀಮ್ ಪಾಷಾ ರವರ ಹೆಸರಿಗೆ 32 X 32 ಅಡಿ ವಿಸ್ತೀರ್ಣ ದ ಆಸ್ತಿಯನ್ನು ಖಾತೆ ಮಾಡಿಸಿದ್ದೇನೆ ಎಂದರೆ ಅದು ಅವರ ಭಾಗಕ್ಕೆ ಬಂದಿದೆ. ನನ್ನ ಸಹೋದರ ಮಹಮದ್ ಜಲೀಲ್ ರವರ ಹೆಸರಿಗೆ 41 X 32 ಅಡಿ ವಿಸ್ತೀರ್ಣ ದ ಆಸ್ತಿಯನ್ನು ಖಾತೆ ಮಾಡಿಸಿದ್ದೇನೆ ಎಂದರೆ ಅದು ಅವರ ಭಾಗಕ್ಕೆ ಬಂದಿದೆ. ನನ್ನ ತಂದೆಗೆ ಪೂರ್ವ ಪಶ್ಚಿಮವಾಗಿ ಇದ್ದಂತಹ 120 ಅಡಿಗೆ ಬದಲಾಗಿ 141 ಅಡಿಗೆ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 141 ಅಡಿ ಆಸ್ತಿಗೆ ನಮಗೆ ಪಿತ್ರಾರ್ಜಿತವಾಗಿ ಹಕ್ಕು ಇತ್ತು ಎಂದು ತೋರಿಸಲು ದಾಖಲೆಹಾಜರು ಪಡಿಸಿದ್ದೇನೆ. ನನ್ನ ತಂದೆಗೆ 120 ಅಡಿ ಆಸ್ತಿ ಮಾತ್ರ ಇದ್ದು, ನಾವು 141 ಅಡಿಗೆ ಖಾತೆಯನ್ನು ಸುಳ್ಳಾಗಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಅಕ್ರಮವಾಗಿ ಹೆಚ್ಚುವರಿಯಾಗಿ ಖಾತೆ ಮಾಡಿಸಿಕೊಂಡಿರುವುದರಿಂದ ಪಂಚಾಯಿತಿಯಲ್ಲಿ ನಮ್ಮ ವಿರುದ್ಧ ಅಪೀಲು ಮಾಡಿದ್ದರು ಎಂದರೆ ಸರಿಯಲ್ಲ.

4. ಸರ್ವೆ ನಂಬರ್ 17 ರಲ್ಲಿ ಮೈಸೂರು –ಬೆಂಗಳೂರು ಹೆದ್ದಾರಿಯಿಂದ ನಿಡಘಟ್ಟಕ್ಕೆ ಹೋಗುವ ರಸ್ತೆ ಹಾದು ಹೋಗಿದೆ ಎಂದರೆ ಸರಿ. ರಸ್ತೆಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ

ಎರಡೂ ಕಡೆಗೆ ಸರ್ವೆ ನಂಬರ್ 17 ರ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ನಿಡಘಟ್ಟ ರಸ್ತೆಯ ಉತ್ತರಕ್ಕೆ ನಿಡಘಟ್ಟ ಗ್ರಾಮದ ರಸ್ತೆ ಇದೆ ಎಂದರೆ ಸರಿಯಲ್ಲ. ನಾನು ಅಕ್ರಮ ಪಂಚಾಯಿತಿ ಖಾತೆಯ ಆಧಾರದ ಮೇಲೆ ನಾನು ಕಟ್ಟಡ ಕಟ್ಟಲು ಮುಂದುವರಿಸಿದ್ದರಿಂದ ರಸ್ತೆಯ ಜಾಗ ಒತ್ತುವರಿಯಾಗಿ ಸಾರ್ವಜನಿಕರಿಗೆ ತೊಂದರೆ ಆಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಸಾರ್ವಜನಿಕರು ನನ್ನ ವಿರುದ್ಧ ಈ ದಾವೆಯನ್ನು ಪ್ರಾತಿನಿಧಿಕ ದಾವೆಯಾಗಿ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

5. ನ್ಯಾಯಾಲಯದಿಂದ ವಸ್ತು ಸ್ಥಿತಿಯನ್ನು ಅಳತೆ ಮಾಡಲು ಬಂದಾಗ ನಮಗೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿ. ಅಳತೆಯನ್ನು ಸಾರ್ವಜನಿಕರ ಸಮ್ಮುಖದಲ್ಲಿ ಮಾಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಅಳತೆ ಮಾಡಿದಾಗ ತಾಲ್ಲೂಕು ಸರ್ವೆಯರ್ ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ. ನಾನು ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ, ಅವರು ಕಛೇರಿಗೆ ಬನ್ನಿ ಎಂದು ಹೇಳಿ ಕಛೇರಿಯಲ್ಲಿ ಸಹಿ ಮಾಡಿಸಿಕೊಂಡಿದ್ದಾರೆ. ನಾನು ಸ್ಥಳದಲ್ಲಿ ವಸ್ತು ಸ್ಥಿತಿಯಂತೆ ಅಳತೆ ಮಾಡಿರುವುದನ್ನು ಒಪ್ಪಿ ಸಹಿ ಮಾಡಿದ್ದರೂ ಸಹ ಕಛೇರಿಯಲ್ಲಿ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನ್ಯಾಯಾಲಯದಿಂದ ಅಳತೆ ಮಾಡಲು ಬಂದಾಗ ಒಬ್ಬ ಪಕ್ಷಗಾರರ ಪರವಾಗಿ ಅಳತೆ ಮಾಡಿ ವರದಿ ಸಲ್ಲಿಸಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಕಮೀಷನ್ ರವರು ತನ್ನ ವರದಿಯಲ್ಲಿ ಬಿ ಮತ್ತು ಸಿ

ಷೆಡ್ಯೂಲ್ ಆಸ್ತಿಗಳು ಎ ಷೆಡ್ಯೂಲ್ ಆಸ್ತಿಯ ಒಳಗಡೆ ಬರುತ್ತವೆ ಎಂದು ಹೇಳಿರುವುದರಿಂದ ನನಗೆ ಅದರಿಂದ ತೊಂದರೆ ಆಗುತ್ತದೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 17 ರ ಆಸ್ತಿ ಮತ್ತು ನಮ್ಮ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಗಳು ನನಗೆ ಸೇರಿದ ಆಸ್ತಿಗಳು ಎಂದು ಹೇಳಿರುವುದು ಸುಳ್ಳು ಆಗಿದ್ದು, ಅವುಗಳು ಎ ಷೆಡ್ಯೂಲ್ ಆಸ್ತಿಯಲ್ಲಿ ಬರುವುದರಿಂದ ಅವುಗಳ ಸರ್ವೆ ನಂಬರ್ 17 ಕ್ಕೆ ಸಂಬಂಧಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ನಾನು 30 ವರ್ಷಗಳ ಹಿಂದೆಯೇ ಅಂಗಡಿ ಮಳಿಗೆಗಳನ್ನು ಕಟ್ಟಿಕೊಂಡು ಇದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಸ್ವತ್ತಿನಲ್ಲಿ ನನಗಾಗಲೀ ಅಥವಾ ನಮ್ಮ ಕುಟುಂಬದವರಿಗಾಗಲೀ ಯಾವುದೇ ಹಕ್ಕು ಇಲ್ಲದೇ ಇದ್ದರೂ ಅದನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ಒತ್ತುವರಿ ಮಾಡಲು ಪ್ರಯತ್ನಿಸಿದ್ದರಿಂದ ವಾದಿಯರು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಗಳು ಸರ್ವೆ ನಂಬರ್ 17 ರಲ್ಲಿ ಬರುತ್ತವೆ ಎಂದರೆ ಸರಿಯಲ್ಲ. ನಾನು ಈ ಕೇಸ್ ಗೆ ತೊಂದರೆ ಆಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಸರ್ವೆ ನಂಬರ್ 17 ಕ್ಕೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಾನು ಸರ್ವೆ ನಂಬರ್ 17 ರಲ್ಲಿ ಒತ್ತುವರಿ ಮಾಡಿರುವ ಆಸ್ತಿಗೆ ಸಂಬಂಧಿಸಿದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 6 ನೇ ವಾದಿ ಪರ ಶ್ರೀಮತಿ ಬಿ ಸಿ ವಿ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.